# ಸ್ನೇಹ ಶಿಬಿರ

## ಪರಿಚಯ

- ❖ ಪೌಷ್ಟಿಕಾಂಶ ಕೊರತೆ ಇರುವ ಮತ್ತು ಕ್ರಮವತ್ತಾಗಿ ಬೆಳೆಯದೇ ಇರುವ ಮಕ್ಕಳಿಗೆ (ಅಂದರೆ 5 ವರ್ಷಕ್ಕಿಂತ ಕಡಿಮೆ ಪ್ರಾಯ ಹೊಂದಿರುವ ಹಾಗೂ ಜನನ ವೇಳೆಯಲ್ಲಿ ಸಾಧಾರಣದಿಂದ ತೀವ್ರವಾಗಿ ಕಡಿಮೆ ತೂಕ ಹೊಂದಿರುವ ಮಕ್ಕಳಿಗಾಗಿ) ಆರೈಕೆ ಒದಗಿಸುವುದಕ್ಕಾಗಿ ವಿಶೇಷವಾಗಿ ಯೋಜಿಸಿರುವ ಚಟುವಟಿಕೆಗಳನ್ನು ಸ್ನೇಹ ಶಿಬಿರ ಎಂದು ಕರೆಯುತ್ತಾರೆ.
- ❖ ಇದನ್ನು ಈ ರೀತಿಯ ವಿಶೇಷ ಸಮಸ್ಯೆಗಳನ್ನು ಹೊಂದಿರುವ ದೇಶದ 200 ಜಿಲ್ಲೆಗಳನ್ನು ಗುರಿಯಾಗಿಸಿ ರೂಪಿಸಲಾಗಿದೆ.
- ❖ ಇದರಲ್ಲಿನ ಮುಖ್ಯ ಚಟುವಟಿಕೆಗಳು ಈ ಕೆಳಗಿನಂತಿವೆ;
  - o ವಿಶೇಷವಾದ ಆಪ್ತ ಸಮಾಲೋಚನೆಗಳು
  - o ತಾಯಂದಿರಿಗೆ/ಆರೈಕೆ ನೀಡುವ ಸಹಾಯಕರಿಗೆ ಪ್ರಾಯೋಗಿಕ ತರಬೇತಿ ನೀಡುವುದು
  - o ಮೇಲ್ವಿಚಾರಿತ ಆಹಾರ ಉಣಿಸುವಿಕೆಗಳು
- ❖ ಈ ಕಾರ್ಯಕ್ರಮವು ಫಲಿತಾಂಶಾಧಾರಿತ ಮತ್ತು ಸಮಯಬದ್ಧವಾಗಿರುತ್ತದೆ.
- ❖ 20% ಗಿಂತ ಹೆಚ್ಚು ಮಕ್ಕಳು ಅಪೌಷ್ಟಿಕತೆ ಹೊಂದಿರುವ ತಾಲೂಕುಗಳು/ವಲಯಗಳು/ಪ್ರದೇಶಗಳಲ್ಲಿ, ಆದ್ಯತೆ ಮೇರೆಗೆ, ಇದನ್ನು ಅನುಷ್ಠಾನಗೊಳಿಸಲಾಗುತ್ತದೆ.
- ❖ ಇದನ್ನು 3–4 ಅಂಗನವಾಡಿಗಳನ್ನು ಸೇರಿಸಿ ಒಂದು ಕಡೆ ಅನುಷ್ಠಾನಗೊಳಿಸಲಾಗುತ್ತದೆ.
- ❖ ಈ ಶಿಬಿರವನ್ನು ಏರ್ಪಡಿಸುವುದಕ್ಕಾಗಿ ಪ್ರತಿ ವಿಶೇಷ ಸಮಸ್ಯಾತ್ಮಕ ಜಿಲ್ಲೆಯಲ್ಲಿ ಹೆಚ್ಚುವರಿ ಅಂಗನವಾಗಿ ಕಾರ್ಯಕರ್ತೆಯರನ್ನು ನೇಮಿಸಲಾಗುತ್ತದೆ.




### ಸ್ನೇಹ ಶಿಬಿರಕ್ಕೆ ಬೇಕಾಗುವ ಅವಶ್ಯಕ ವಸ್ತುಗಳು

• • •

- ❖ ನವಜಾತ ಶಿಶುಗಳಿಗಾಗಿ ಮತ್ತು ಇತರ ಮಕ್ಕಳಿಗಾಗಿ ತೂಕ ಯಂತ್ರಗಳು.
- ❖ ಸಮುದಾಯ ಜಾಗೃತಿ ಪರಿಕರಗಳು – ಸಮುದಾಯ ಬೆಳವಣಿಗೆ ಚಾರ್ಟ್‌ಗಳು, “ತಾಯಿ ಮತ್ತು ಮಗುವಿನ ಸುರಕ್ಷೆ ಕಾರ್ಡ್” ಇತ್ಯಾದಿಗಳು.
- ❖ ಲೇಖನ ಸಾಮಾಗ್ರಿಗಳು, ಬೆಳವಣಿಗೆ ಚಾರ್ಟ್‌ಗಳು ಇತ್ಯಾದಿಗಳು.
- ❖ ತೂಕ ಗಳಿಕೆ, ವೈದ್ಯರ ಸಲಹೆ, ಹಾಜರಾತಿ ಇತ್ಯಾದಿಗಳನ್ನು ದಾಖಲಿಸಲು ಎನ್.ಸಿ.ಸಿ.ಎಸ್. ರಿಜಿಸ್ಟರ್.
- ❖ ಅಡುಗೆ ಪಾತ್ರೆಗಳು, ಉಣಿಸುವ ಬಟ್ಟಲುಗಳು ಮತ್ತು ಚಮಚಗಳು (ಒಂದು ವೇಳೆ ಇವುಗಳು ಲಭ್ಯವಿಲ್ಲದಿದ್ದರೆ ಸಹಾಯಕಿಯರು ತಮ್ಮ ಮನೆಯಿಂದ ತರಬಹುದಾಗಿದೆ).
- ❖ ನೀರು ದಾಸ್ತಾನು ಇರಿಸುವ ಸೌಲಭ್ಯ ಮತ್ತು ಸ್ವಚ್ಛ ಮತ್ತು ಸುರಕ್ಷಿತ ನೀರಿನ ವ್ಯವಸ್ಥೆ.
- ❖ ನೈಲ್ ಕಟ್ಟರ್.
- ❖ ಸಾಬೂನು ಮತ್ತು ಅಂಗವಸ್ತ್ರ.
- ❖ ಔಷಧಿ ಕಿಟ್.
- ❖ ಡಿಸ್‌ಪ್ಲೇ ಬೋರ್ಡ್‌ಗಳು, ಸ್ಕೋರ್ ಬೋರ್ಡ್‌ಗಳು ಮತ್ತು ಇತರ ಪರಿಕರಗಳು.

## ಪೌಷ್ಠಿಕಾಂಶ ಕುರಿತಂತೆ ಆಪ್ತ ಸಮಾಲೋಚನೆಗಳು ಮತ್ತು ಮಗುವಿನ ಆರೈಕೆ ತರಗತಿಗಳು (ಎನ್.ಸಿ.ಸಿ.ಎಸ್.)

- ಎನ್.ಸಿ.ಸಿ.ಎಸ್. ಎಂದರೆ 12 ದಿನಗಳ ಪುನರ್ವಸತಿ ಕಾರ್ಯಕ್ರಮ.
- ಇದನ್ನು ಅಪೌಷ್ಠಿಕತೆ ಹೊಂದಿರುವ ಮಕ್ಕಳ ತಾಯಂದಿರಿಗಾಗಿ ಏರ್ಪಡಿಸಲಾಗುತ್ತದೆ.
- ಎನ್.ಸಿ.ಸಿ.ಎಸ್. ಅಡಿಯಲ್ಲಿ ಬರುವ ಚಟುವಟಿಕೆಗಳು ಮತ್ತು ಸೇವೆಗಳ ಅನುಕ್ರಮಗಳು ಈ ಕೆಳಗಿನಂತಿವೆ:
    - ತೂಕವನ್ನು ದಾಖಲಿಸುವುದು (ಆಗಮನ ತೂಕ ಮತ್ತು ನಿರ್ಗಮನ ತೂಕ).
    - ಹುಳದ ಔಷಧಿ ನೀಡುವುದು ಮತ್ತು ಐರನ್ ಫೋಲಿಕ್ ಆಸಿಡ್ ಪೂರಕ ಕೊಡಿಸುವುದು.
    - ಬಿಸಿಯಾಗಿ ತಯಾರಿಸಿದ ಊಟವನ್ನು ಹೆಚ್ಚುವರಿಯಾಗಿ ಸ್ಥಳದಲ್ಲೇ ಉಣಿಸುವುದು **(300–400 ಕ್ಯಾಲರಿ ಮತ್ತು 18 ಗ್ರಾಂ ಪ್ರೋಟೀನ್).**



    - ಮಾಡಿ ಕಲಿ ಉಣಿಸುವ ಅಧಿವೇಶನಗಳು, ಸರಿಯಾದ ಉಣಿಸುವಿಕೆ ವಿಧಾನಗಳನ್ನು ಕಲಿಯುವುದು, ಶುಚಿತ್ವ ಮತ್ತು ಆರೋಗ್ಯ, ಮಾನಸಿಕ–ಸಾಮಾಜಿಕ ಅಭ್ಯಾಸಗಳು, ಹಾಗೂ ಕೆಲವೊಂದು ಸಕಾರಾತ್ಮಕ ಕ್ರಮಗಳನ್ನು ಇತರ ತಾಯಂದಿರೊಂದಿಗೆ ಸೇರಿ ಕಲಿಯುವುದು.
    - ಆರೈಕೆ ಕ್ರಮಗಳ ಬಗ್ಗೆ ಆಪ್ತ ಸಮಾಲೋಚನೆ.
    - ಆರೈಕೆ ನಿರ್ವಹಣೆ ಮತ್ತು ಮಕ್ಕಳ ತೂಕ ಗಳಿಕೆಯ ಕುರಿತು ಅವರಿಗೆ ತಿಳುವಳಿಕೆ ನೀಡುವುದು.
    - ವೈದ್ಯಕೀಯ ನೆರವು ಮತ್ತು ಮಾಹಿತಿ ಸೇವೆಗಳು
        - ದೈನಂದಿನ ಸೇವೆಗಳು – ರೋಗ ನಿರೋಧಕ ಚುಚ್ಚುಮದ್ದುಗಳು, ವಿಟಮಿನ್ 'ಎ' ಮತ್ತು ಐರನ್ ಫೋಲಿಕ್ ಆಸಿಡ್ ಪೂರಕಗಳು.
        - ಎ.ಎನ್.ಎಂ/ವೈದ್ಯಾಧಿಕಾರಿಗಳಿಂದ ಆರೋಗ್ಯ ತಪಾಸಣೆಗಳು ಮತ್ತು ಸೂಕ್ತವಾದ ಚಿಕಿತ್ಸೆಗಳು.
        - ಸಮಸ್ಯೆಗಳಿದ್ದಲ್ಲಿ ಎ.ಎನ್.ಎಂ/ಮಾನ್ಯತೆ ಪಡೆದಿರುವ ಸಾಮಾಜಿಕ ಆರೋಗ್ಯ ಕಾರ್ಯಕರ್ತೆ/ವೈದ್ಯಕೀಯ ಅಧಿಕಾರಿ ಗಳ ಮೂಲಕ ಚಿಕಿತ್ಸೆಗೆ ಕರೆದೊಯ್ಯುವುದು.
    - 18 ದಿನಗಳ ಮನೆ ಆರೈಕೆ ಮೂಲಕ ಚಿಕಿತ್ಸೋತ್ತರ ಕ್ರಮಗಳು.
    - **6–9 ತರಗತಿಗಳು (ತಿಂಗಳುಗಳ)** ಬಳಿಕ ಯಾವುದೇ ಗ್ರಾಮದಲ್ಲಿ ವರ್ಷಕ್ಕೊಮ್ಮೆ ತ್ರೈಮಾಸಿಕವಾಗಿ ಎನ್.ಸಿ.ಸಿ.ಎಸ್. ಏರ್ಪಡಿಸಬಹುದು ಹಾಗೂ ಇದರಿಂದಾಗಿ ಯಾವುದೇ ಮಗು ಅತಿ ಕಡಿಮೆ ತೂಕಕ್ಕೆ ಇಳಿಯುವುದಿಲ್ಲ ಮತ್ತು ಗ್ರಾಮದಲ್ಲಿ ಹೊಸ ಪ್ರಕರಣ ಉಂಟಾಗುವುದಿಲ್ಲ ಎಂಬುದನ್ನು ಖಚಿತಪಡಿಸಬೇಕು.

### ಅಂಗನವಾಡಿ ಕಾರ್ಯಕರ್ತೆಯ ಜವಾಬ್ದಾರಿಗಳು

- ಆರಂಭಿಕ ವರ್ಷಗಳಲ್ಲಿ ಸಾಧಾರಣದಿಂದ ತೀವ್ರವಾಗಿ ಕಡಿಮೆ ತೂಕ ಹೊಂದಿರುವ/ಇಳಿಯಬಹುದಾದ ಮಕ್ಕಳನ್ನು ಗುರುತಿಸಬೇಕು.
- ಸಿ.ಡಿ.ಪಿ.ಒ.ಗೆ ತಿಳಿಸಬೇಕು ಹಾಗೂ ಕಡಿಮೆ ತೂಕ ಹೊಂದಿರುವ ಮಕ್ಕಳ ಪಟ್ಟಿಯನ್ನು ಕಳಿಸಬೇಕು.
- ಲಿಮಕ್ಕಳ ತೂಕ ನೋಡುವಲ್ಲಿ ಸಿ.ಡಿ.ಪಿ.ಒ.ಗೆ ಸಹಾಯ ಮಾಡಬೇಕು.
- ಪೌಷ್ಠಿಕಾಂಶ ಸಮಾಲೋಚನೆ ಸಭೆಗಳನ್ನು ಮತ್ತು ಸ್ನೇಹ ಶಿಬಿರಗಳನ್ನು ಏರ್ಪಡಿಸಬೇಕು.
- ಮಕ್ಕಳ ಜೊತೆಗೆ ಅವರಿಗೆ ಸೇವೆ ಒದಗಿಸುವವರನ್ನು ಕೂಡಾ ಸೇರಿಸಿಕೊಳ್ಳಬೇಕು.
- ಊಟಕ್ಕೆ ಮುಂಚೆ ಮತ್ತು ಊಟವಾದ ಬಳಿಕ ಮಕ್ಕಳು ಕೈ ತೊಳೆಯುತ್ತಾರೆ ಎಂಬುದನ್ನು ಆರೈಕೆ ನೀಡುವವರು ಖಚಿತಪಡಿಸಬೇಕು.
- ಮಕ್ಕಳಿಗೆ ಉಣಿಸುವುದಕ್ಕಾಗಿ ತಾಯಂದಿರಿಗೆ ಅಥವಾ ಆರೈಕೆ ನೀಡುವವರಿಗೆ ಸಹಾಯ ಮಾಡಬೇಕು.
- ವೈದ್ಯಕೀಯ ಸಮಸ್ಯೆ ಹೊಂದಿರುವ ಮತ್ತು ತೀವ್ರವಾಗಿ ಕಡಿಮೆ ತೂಕ ಹೊಂದಿರುವ ಮಕ್ಕಳನ್ನು ಎ.ಎನ್.ಎಂ/ವೈದ್ಯಾಧಿಕಾರಿಗೆ ತೋರಿಸಬೇಕು.
- ಆರೋಗ್ಯ ಮತ್ತು ಪೌಷ್ಠಿಕಾಂಶ ಅಧಿವೇಶನದಲ್ಲಿ ಆಯಾ ದಿನದ ವಿಚಾರಗಳನ್ನು ಚರ್ಚಿಸಬೇಕು.
- ಆರೋಗ್ಯವಂತ ಮಕ್ಕಳನ್ನು ಹೊಂದಿರುವ ತಾಯಂದಿರ ಅನುಭವಗಳನ್ನು ಹಂಚಿಕೊಳ್ಳುವುದಕ್ಕಾಗಿ ಅಂತಹ ತಾಯಂದಿರನ್ನು ಗುರುತಿಸಿ ಅವರನ್ನು ಸೇರಿಸಿಕೊಳ್ಳಬೇಕು.
- ಶಿಬಿರದಲ್ಲಿ ಭಾಗವಹಿಸಿದ ಮಕ್ಕಳ ತಾಯಂದಿರ ಮನೆಗಳಿಗೆ ಭೇಟಿ ನೀಡಬೇಕು ಮತ್ತು ಪರಾಮರ್ಶಿಸಬೇಕು.
- ಶಿಬಿರದ ವರದಿಗಳನ್ನು ತಯಾರಿಸಬೇಕು.